ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ನಾವು ಮನಾಪಲಿ ಪರ್ಚೇಸ್‌ಗೆ ಹೋಗಬೇಕು ಎಂದರೆ, there are so many aspirants. We will have to take all these factors into consideration before we take a final decision. I know that other Governments in other States have taken a decision to indulge in monopoly marketing.

ಅದನ್ನು ವಿಚಾರಮಾಡಿ, ಅದರ ಪರಾಪರಗಳನ್ನು ಅಥವಾ ಅದರ ಉಪಯೋಗಗಳನ್ನು ಗಮನದಲ್ಲಿಟ್ಟುಕೊಂಡು ನೋಡಿ ಶೀಘ್ರವಾಗಿ ತೀರ್ಮಾನ ಮಾಡತಕ್ಕಂಥ ಸಾಧ್ಯತೆ ಕಂಡುಬಂದರೆ ಈ ರೀತಿ ತೀರ್ಮಾನ ಮಾಡುವುದಕ್ಕೆ ರಾಜ್ಯ ಸರ್ಕಾರ ಹಿಂದೇಟು ಹಾಕುವುದಿಲ್ಲ. ನಾವು ಮಾಡುತ್ತೇವೆ. ಮಹಾರಾಷ್ಟ್ರ ಸರ್ಕಾರ ಯಾವ ರೀತಿ ತೀರ್ಮಾನ ಮಾಡಿ, ಯಾವ ರೀತಿ ಜಾರಿಕೊಟ್ಟಿದೆ ಎಂಬ ಬಗ್ಗೆ ಸಂಪೂರ್ಣ ವಿವರವನ್ನು ತರಿಸಿಕೊಂಡು ಇದರ ಬಗ್ಗೆ ತೀರ್ಮಾನ ಮಾಡುತ್ತೇವೆ.

ಶ್ರೀ ಪಿ. ಸಿ. ಸಿದ್ದನಗೌಡರ್.—ಅಧ್ಯಕ್ಷರೇ, ಈ ಖಾದಿ ಬೋರ್ಡ್‌ನವರು ಮೊದಲು ಹತ್ತಿ ಖರೀದಿ ಮಾಡುತ್ತಿದ್ದರು ನಮ್ಮ ರಾಜ್ಯ ಸರ್ಕಾರದ ವ್ಯಾಪ್ತಿಯೊಳಗೆ ಈ ಕರ್ನಾಟಕ ಸ್ಟೇಟ್ ಕೋಆಪರೇಟಿವ್ ಮಾರ್ಕೆಟಿಂಗ್ ಫೆಡರೇಶನ್ ಮತ್ತು ಖಾದಿ ಬೋರ್ಡ್ ಬರುತ್ತವೆ. ಮೊದಲು ಅವರು ಹತ್ತಿ ಖರೀದಿ ಮಾಡುತ್ತಿದ್ದರು. ಮಾನ್ಯ ಸಚಿವರು ಈ ಎರಡು ಸಂಸ್ಥೆಗಳಿಂದ ಹತ್ತಿ ಖರೀದಿ ಮಾಡಿಸಿದರೆ ಬಹಳ ಒಳ್ಳೆಯದಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಇದು ಸಾಧ್ಯವಿಲ್ಲದಂಥ ಮಾತು ಎಂದು ಬಹಳ ಅನಿವಾರ್ಯವಾಗಿ ತಮ್ಮ ಮಾಹಿತಿಗಾಗಿ ಮಾನ್ಯ ಸದಸ್ಯರಿಗೆ ಹೇಳಬೇಕಾಗಿದೆ. ಏಕೆಂದರೆ, ಖಾದಿ ಬೋರ್ಡ್‌ನ ವ್ಯಾಪ್ತಿ ಏನಿದೆ, ಅದು ಹಿಂದೆ ಇದ್ದಹಾಗೆ ಈಗ ಇಲ್ಲ. ಇದು ಕೈಗಾರಿಕಾ ಇಲಾಖೆಯಲ್ಲಿ ಬರತಕ್ಕಂಥ ವಿಚಾರ. ಜೊತೆಗೆ ನಾವು ಈ ವೆಚರ್ ಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಈ ಖಾದಿ ಬೋರ್ಡ್ ಬಗ್ಗೆಯೇ ಹಿಂದೆ ಮಾಡಿದ್ದರಿಂದ ಏನೇನು ಆರೋಪಗಳು ಬಂದಿವೆ ಏನೇನು ವಿಚಾರಗಳು ಬಂದವು ಎಂದು ಮಾನ್ಯ ಸದಸ್ಯರಿಗೆ ಗೊತ್ತಿರಬಹುದು. ಸ್ಟೇಟ್ ಮಾರ್ಕೆಟಿಂಗ್ ಫೆಡರೇಷನ್ ಮೂಲಕ ಮಾಡುವ ಬಗ್ಗೆ ಬೇರೆ ಬೇರೆ ಕೆಲವು ವಿಚಾರಗಳು ಇವೆ. ನಿಜವಾಗಿ ಹೇಳಬೇಕೆಂದರೆ, Cotton Corporation of India is meant to deal with cotton matters only. ಆಫರೇ ಸಿದ್ದರಿಲ್ಲವೆಂದ ಮೇಲೆ ಉಳಿದ ಹಣಕಾಸಿನ ಪರಿಸ್ಥಿತಿ ಏನು ಎಂಬುದನ್ನು ತಾವು ವಿಚಾರ ಮಾಡಬೇಕು. ಹಿಂದೆ ಹತ್ತಿಯನ್ನು ಬೆಳಗಾವಿ, ಬಿಜಾಪುರ, ಧಾರವಾಡ ಜಿಲ್ಲೆಗಳಲ್ಲಿ ಎಷ್ಟು ಬೆಳೆಯಲಾಗುತ್ತಿದ್ದರು, ಅದರ ಪ್ರಮಾಣ ಈಗ ಎರಿಯಾಕ್ಕಷ್ಟೇ ಸೀಮಿತಗೊಂಡಿಲ್ಲ. ಇದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಕರ್ನಾಟಕದ ಹಲವಾರು ಭಾಗಗಳಿಗೆ ಇದು ವಿಸ್ತರಣೆಗೊಂಡಿರುವುದರಿಂದ ಈಗಾಗಲೇ ಅದು ದೊಡ್ಡ ಬೆಳೆಯಾಗಿ ಪರಿವರ್ತನೆ ಹೊಂದಿದೆ. ಆದ್ದರಿಂದ ಅವರು ಹೇಳಿರುವಂತೆ ಮಂಡಲಿ ಮುಖಾಂತರ ಖರೀದಿ ಮಾಡುವ ವಿಚಾರ ಬೇಡ, ಅದು ಸಾಧುಕೂಡ ಅಲ್ಲ.

ಶಿಗ್ಗಾಂವ್ ಮತ್ತು ಸವಣೂರು ಟೌನಿಗೆ ವರದಾ ನದಿಯಿಂದ ಕುಡಿಯುವ ನೀರಿನ ಯೋಜನೆ

೧೧೦೫. ಶ್ರೀ ಮಂಜುನಾಥ ಸಿ. ಕಂನ್ನೂರ್ (ಶಿಗ್ಗಾಂವ್).— ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ಧಾರವಾಡ ಜಿಲ್ಲೆಯ ಶಿಗ್ಗಾಂವ್ ಮತ್ತು ಸವಣೂರು ನಗರಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

೨) ಮೇಲ್ಕಂಡ ಶಿಗ್ಗಾಂವ್ ಸವಣೂರು ನಗರಗಳಿಗೆ ವರದಾ ನದಿಯಿಂದ ಕುಡಿಯುವ ನೀರಿನ ಯೋಜನೆಗೆ ಕೈಗೊಳ್ಳುವ ಕಾರ್ಯಕ್ರಮವನ್ನು ಸರ್ಕಾರದವರು ಹಾಕಿಕೊಂಡಿರುವರೆ ?

೩) ಹಾಗಿದ್ದಲ್ಲಿ ಎಷ್ಟು ದಿವಸಗಳಲ್ಲಿ ಈ ಯೋಜನೆ ಕಾರ್ಯಗತ ಮಾಡಲಾಗುವುದು ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

೧) ಹೌದು

೨) ಹೌದು

೩) ಈ ಯೋಜನೆಯನ್ನು ತಯಾರಿಸಲು ಸಮೀಕ್ಷೆ ನಡೆಸಲಾಗುತ್ತಿದ್ದು ಅಂದಾಜನ್ನು ಶೀಘ್ರದಲ್ಲಿಯೇ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಪಡೆದು ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲು ಕ್ರಮ ತೆಗೆದುಕೊಳ್ಳಲಾಗುವುದು. ಹಣದ ವ್ಯವಸ್ಥೆಯಾದ ನಂತರ ೨–೩ ವರ್ಷಗಳಲ್ಲಿ ಯೋಜನೆಯನ್ನು ಕಾರ್ಯಗತ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ವಂಜುನಾಥ್ ಸಿ. ಕುನ್ನೂರ್.— ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಉತ್ತರದಲ್ಲಿ ಶಿಗ್ಗಾಂವ್ ಮತ್ತು ಸವಣೂರು ನಗರಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ತಿಳಿಸಿದ್ದಾರೆ. ಇದರ ಜೊತೆಗೆ ವರದಾ ನದಿಯಿಂದ ಶಿಗ್ಗಾಂವ್ ಮತ್ತು ಸವಣೂರು ನಗರಗಳಿಗೆ ಕುಡಿಯುವ ನೀರಿನ ಶಾಶ್ವತ ಯೋಜನೆಯನ್ನು ಮಾಡುತ್ತೇವೆಂಬುದನ್ನೂ ಒಪ್ಪಿಕೊಂಡಿದ್ದಾರೆ. ಆದರೆ ಈ ಒಂದು ಯೋಜನೆಯನ್ನು ನಮ್ಮ ಮಾಜಿ ಮುಖ್ಯಮಂತ್ರಿಗಳಾದ ಶ್ರೀಮಾನ್ ಎಸ್. ನಿಜಲಿಂಗಪ್ಪನವರ ಕಾಲದಿಂದಲೂ ಮಾಡುತ್ತಲೇ ಬರುತ್ತಿದ್ದಾರೆಂದು ನಮ್ಮ ಮತ ಕ್ಷೇತ್ರದಲ್ಲಿ ಹೇಳುತ್ತಿದ್ದಾರೆ. ನಾವು ಮಾಡುತ್ತೇವೆಂದು ನಮ್ಮ ಕ್ಷೇತ್ರದಲ್ಲಿ ಹೇಳಿದರೆ, ಹೆಜ್ಜೆ ಹೆಜ್ಜೆಗೂ, ಮಾಜಿ ಮುಖ್ಯಮಂತ್ರಿಗಳಾದ ನಿಜಲಿಂಗಪ್ಪನವರೂ ಮಾಡಲಿಲ್ಲ, ನೀವು ಹೇಗೆ ಮಾಡುತ್ತೀರಿ ಎಂದು ಕೇಳುತ್ತಿದ್ದಾರೆ. ನೀರಿಗಾಗಿ ಶಿಗ್ಗಾಂವ್‌ನಲ್ಲಿ ಮೆರವಣಿಗೆಯೂ ಆಗಿದೆ, ಪ್ರತಿಭಟನೆಯೂ ಆಗಿದೆ, ಈ ವರದಿಗಳು ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಬಂದಿದೆ. ನಮ್ಮ ಈ ಗ್ರಾಮಗಳಲ್ಲಿ ೧೫ ದಿವಸಕ್ಕೊಮ್ಮೆ ಕುಡಿಯುವ ನೀರು ಸಿಗುತ್ತಿದೆ. ಅಲ್ಲಿಯ ಜನ ಅಧಿಕಾರಿಗಳಿಗೆ ಘೇರಾವ್ ಮಾಡಿದ್ದಾರೆ. ಜಿಲ್ಲಾಧಿಕಾರಿಗಳೂ ಕೂಡ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆ, ಆದ್ದರಿಂದ ಈ ಯೋಜನೆಯನ್ನು ಕೂಡಲೇ ಕಾರ್ಯಗತ ಮಾಡಬೇಕೆಂದು ಮಾನ್ಯ ಮಂತ್ರಿಗಳನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.— ಮಾನ್ಯ ಅಧ್ಯಕ್ಷರೇ, ನಿಜವಾಗಿಯೂ ಈ ಎರಡು ಪಟ್ಟಣಗಳಲ್ಲಿ ಕುಡಿಯುವ ನೀರಿನ ಪರಿಸ್ಥಿತಿ ಬಹಳ ಗಂಭೀರವಾಗಿದೆ. ಈ ಪರಿಸ್ಥಿತಿಯನ್ನು ಸರ್ಕಾರ ಬಹಳ ಎಚ್ಚರಿಕೆಯಿಂದ ಅರಿತುಕೊಂಡಿದೆ. ವರದಾ ನದಿಯಿಂದ ಕುಡಿಯುವ ನೀರು ಸರಬರಾಜು ಮಾಡುವ ಸಲುವಾಗಿ, ೨೮ ಲಕ್ಷ ರೂಪಾಯಿಗಳ ಯೋಜನೆಯನ್ನು ಸಿದ್ಧಪಡಿಸುವುದಕ್ಕಾಗಿ ನೀರು ಸರಬರಾಜು ಮಂಡಲಿಯವರಿಗೆ ನಮ್ಮ ಮುಖೇನ ಆದೇಶ ಕೊಡುತ್ತಿದ್ದೇನೆ. ಆದಷ್ಟು ಬೇಗ ಆದ್ಯತೆ ಮೇರೆಗೆ ಈ ಎರಡು ಪಟ್ಟಣಗಳಿಗೆ ಕುಡಿಯುವ ನೀರಿನ ವ್ಯವಸ್ಥೆಗಾಗಿ, ಮಾನ್ಯ ಸದಸ್ಯರ ಕಳವಳವನ್ನು ಅರ್ಥಮಾಡಿಕೊಂಡು, ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.

ಶ್ರೀ ವಂಜುನಾಥ್ ಸಿ. ಕುನ್ನೂರ್.— ಮಾನ್ಯ ಮಂತ್ರಿಗಳು ೨೮ ಲಕ್ಷ ರೂಪಾಯಿಗಳ ಯೋಜನೆಯನ್ನು ಮಾಡಲಾಗುವುದೆಂದು ಹೇಳಿದರು, ಆದರೆ ಈ ಯೋಜನೆಯು ಬೋರ್‌ವೆಲ್‌ಗಳ ಮೂಲಕ ನೀರಿನ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಮಾಡಿರತಕ್ಕ ಯೋಜನೆ ಇದೆ. ಈ ರೀತಿ ಬೋರ್‌ವೆಲ್‌ಗಳ ಮೂಲಕ ಸರಬರಾಜು ಮಾಡುವ ತಾತ್ಕಾಲಿಕ ಯೋಜನೆಗೆ ೨ ಕೋಟಿ ರೂಪಾಯಿಗಳು ಆಗಬಹುದು ಎಂಬುದನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಆದ್ದರಿಂದ ತಾತ್ಕಾಲಿಕವಾದ ಕುಡಿಯುವ ನೀರಿನ ಸಮಸ್ಯೆ ಮತ್ತು ಶಾಶ್ವತ ಕುಡಿಯುವ ನೀರಿನ ಸಮಸ್ಯೆ ಎರಡನ್ನೂ ಮಾನ್ಯ ಮಂತ್ರಿಗಳು ಬಗೆಹರಿಸಬೇಕೆಂದು ವಿನಯಪೂರ್ವಕವಾಗಿ ವಿನಂತಿಸುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.— ಹಾಲಿ ಅಲ್ಲಿ ತಾತ್ಕಾಲಿಕ ವ್ಯವಸ್ಥೆ ಇದೆ, ಖಾಯಂ ವ್ಯವಸ್ಥೆಯೂ ಆಗಬೇಕಾಗಿದೆ. ಅದಕ್ಕೆ ವರದಾನದಿಯು ಮೂಲವೆ ಆಧಾರವೆಂದು ತಿಳಿದುಕೊಂಡಿದ್ದೇವೆ. ಮಾನ್ಯ ಸದಸ್ಯರು ಒಂದೆರಡು ಸಲ ನನ್ನನ್ನು ಭೇಟಿ ಮಾಡಿದ್ದಾರೆ, ನಮಗೆ ಒತ್ತಾಯ ತಂದಿದ್ದಾರೆ. ಈ ಯೋಜನೆ ಪೂರ್ಣವಾಗುವವರೆಗೆ ಕೊಳವೆ ಬಾವಿಗಳನ್ನು ಕೊಡತಕ್ಕಂಥ ತಾತ್ಕಾಲಿಕ ವ್ಯವಸ್ಥೆ ಏನಿದೆ ಇತರ ಪಟ್ಟಣ ಪ್ರದೇಶಗಳಿಗಿಂತ ಹೆಚ್ಚಾಗಿ ಈ ಎರಡು ಅವಳಿ ಪಟ್ಟಣಗಳಿಗೆ ಅದನ್ನು ಕೊಡಲಿಕ್ಕೆ ನಾನು ಪ್ರಯತ್ನ ಮಾಡುತ್ತೇನೆ.